
# ಶ್ರೀಗಂಧ

ರಾಜ್ಯೋತ್ಸವ ವಿಶೇಷ ಸಂಚಿಕೆ. ನವೆಂಬರ್-೨೦೦೯



Ambassador

भारतीय राजदूतावास
السفارة الهندية
EMBASSY OF INDIA
P.O.Box 2788, DOHA- QATAR
Tel.:(974)4672025,Fax:4670448
E-Mail: ambassor@qatar.net.qa
: indembdh@qatar.net.qa
Website: www.indianembassy.gov.qa



November 3, 2009

## MESSAGE

I am happy to learn that Karnataka Sangha – Qatar is celebrating 'Kannada Rajyothsava', the formation day of Karnataka and will be releasing the Annual Souvenir 'Sri Ghandha' to commemorate the occasion.

I am glad to learn of the commendable work in Qatar that the Karnataka Sangha has been doing. This includes conducting cultural programmes, sports games, quiz competitions etc. and most importantly, social service activities and charity events. I hope that the Karnataka Sangha - Qatar will keep up its good work and continue to contribute to the cultural and social well-being of Indians in Qatar.

On this occasion when the Karnataka Sangha is celebrating the Karnataka State formation day, I would like to congratulate each and every member and convey my best wishes for greater success in the years ahead.

(Deepa Gopalan Wadhwa)

"ಕನ್ನಡ ಅನುಷ್ಠಾನ ವರ್ಷ-೨೦೦೯"

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್**
ಉಪಾಧ್ಯಕ್ಷರು
ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ

ಕರ್ನಾಟಕ ಸರ್ಕಾರ

ಕೊಠಡಿ ಸಂ: 6 ಮತ್ತು 7
ವಿಕಾಸ ಸೌಧ
ಬೆಂಗಳೂರು – 560 001
ದೂರವಾಣಿ ಸಂ.: 080-22034057
080-22034058
ಮೊಬೈಲ್ ಸಂ.: 9845225940
ಫ್ಯಾಕ್ಸ್: 080-22374708

10/11/2009




## ಸಂದೇಶ

ಖತಾರ್‌ನಲ್ಲಿ "ಕರ್ನಾಟಕ ಸಂಘ"ವು ಕನ್ನಡ ರಾಜ್ಯೋತ್ಸವ ಸಮಾರಂಭವನ್ನು ದಿನಾಂಕ: 29.11.2009ರಂದು ಆಚರಿಸುತ್ತಿರುವುದು ಸಂತಸದ ಸಂಗತಿ.

"ಕರ್ನಾಟಕ ಸಂಘ" ಉದಯವಾದಂದಿನಿಂದ ನಾಡಿನ ಬೆಳವಣಿಗೆಯೊಂದಿಗೆ ಹೆಜ್ಜೆ ಹಾಕಿ, ನುಡಿಸೇವೆ ಮತ್ತು ಕನ್ನಡ ಸಂಸ್ಕೃತಿಯ ವಿಚಾರ ವಿನಿಮಯಗಳ ವೇದಿಕೆಯೊಂದನ್ನು ಕನ್ನಡಿಗರಿಗೆ ನೀಡುವುದು ಹಾಗೂ ಕನ್ನಡ ನಾಡಿನ ಪರಂಪರಾಗತ ಮೌಲ್ಯಗಳನ್ನು ನಾಡಿನ ಹೊರಗುಳಿದಿರುವ ಯುವಕರಿಗೆ ಪರಿಚಯಿಸುವ ಮತ್ತು ಈ ಮನೋಭಾವವನ್ನು ಬೆಳೆಸುವ ಮೂಲಕ ನಾಡಿನ ಸಿರಿವಂತ ಕಲೆ-ಸಂಸ್ಕೃತಿಯ ಅರಿವು ಮೂಡಿಸುವ ಧ್ಯೇಯೋದ್ದೇಶವನ್ನು ಹೊಂದಿ ಕಾರ್ಯನಿರ್ವಹಿಸುತ್ತಿದ್ದು, ಹಲವಾರು ಸಾಮಾಜಿಕ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡು ಬಂದಿರುವುದರ ಜೊತೆಯಲ್ಲಿ ತಾಯ್ನಾಡಿನ ಕನ್ನಡಿಗರ ಕಲ್ಯಾಣಕ್ಕಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದು ಶ್ಲಾಘನೀಯ. ಈ ಸುಸಂದರ್ಭದ ಸವಿನೆನಪಿಗಾಗಿ "ಶ್ರೀಗಂಧ" ಎಂಬ ಸ್ಮರಣಸಂಚಿಕೆ ಹೊರತರಲಿರುವುದು ಸ್ವಾಗತಾರ್ಹ.

ಕನ್ನಡ ರಾಜ್ಯೋತ್ಸವ ಕಾರ್ಯಕ್ರಮಗಳು ಯಶಸ್ವಿಯಾಗಿ ಜರುಗಲೆಂದು ಶುಭ ಹಾರೈಸುತ್ತೇನೆ. "ಕರ್ನಾಟಕ ಸಂಘ"ದ ಸದಸ್ಯರಿಗೆ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದ ಆಯೋಜಕರಿಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳು.

(ಕ್ಯಾಪ್ಟನ್ ಗಣೇಶ್ ಕಾರ್ಣಿಕ್)



# ಅಧ್ಯಕ್ಷರ ಸಂದೇಶ

ಕನ್ನಡ ಭಾಂಧವರಿಗೆಲ್ಲಾ ನಮಸ್ಕಾರಗಳು.

ಕತಾರಿನ ಕರ್ನಾಟಕ ಸಂಘದ ಅಧ್ಯಕ್ಷನಾಗಿ ನನಗೆ ಸಮಸ್ತ ಕನ್ನಡ ಭಾಂಧವರಿಗೆಲ್ಲಾ ರಾಜ್ಯೋತ್ಸವದ ಶುಭಾಶಯಗಳನ್ನು ಕೋರಲು ಬಹಳ ಹೆಮ್ಮೆಯೆನಿಸುತ್ತಿದೆ. ಈ ವಿಶೇಷ ಸಂದರ್ಭದಲ್ಲಿ, ಸಂಘವು ತನ್ನ ೧೧ ಸಂವತ್ಸರಕ್ಕೆ ಕಾಲಿಡುತ್ತಿರುವ ಶುಭ ಘಳಿಗೆಯಲ್ಲಿ, ನಾನು ಅಧ್ಯಕ್ಷನಾಗಿ , ಈ ಹಿಂದೆ ಸಂಘದ ಏಳಿಗೆಗಾಗಿ ನಿಸ್ವಾರ್ಥದಿಂದ ದುಡಿದ ಸಂಸ್ಥಾಪಕ ಸದಸ್ಯರುಗಳು, ಮಾಜಿ ಅಧ್ಯಕ್ಷರುಗಳು ಹಾಗೂ ಇನ್ನಿತರ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ನಿಸ್ವಾರ್ಥ ಮನೋಭಾವದಿಂದ ಸಂಘದ ಏಳಿಗೆಗಾಗಿ ದುಡಿದ ಎಲ್ಲಾ ಪ್ರಾತಃಸ್ಮರಣೀಯರಿಗೆ ನನ್ನ ಅನಂತಾನಂತ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈ ಮಹನೀಯರ ಏಕನಿಷ್ಠ ದುಡಿಮೆಯ ಫಲವಾಗಿ ಅಂದು ಸಸಿಯಾಗಿದ್ದ ಕರ್ನಾಟಕ ಸಂಘವು ಇಂದು ಹೆಮ್ಮರವಾಗಿ ಬೆಳೆದು ಸುತ್ತಮುತ್ತಲಿನ ಜಗತ್ತಿನಲ್ಲಿ ಬೆರಗುಗೊಳ್ಳುವಂತಹ ಸಾಧನೆಗಳ ಸರಮಾಲೆಗಳೊಂದಿಗೆ ತನ್ನದೇ ಆದ ವಿಶೇಷವಾದ ಛಾಪವನ್ನು ಮುದ್ರಿಸಿದೆ.

ಅದು ಸ್ವಾತಂತ್ರ್ಯ ದಿನಾಚರಣೆಯೇ ಇರಬಹುದು, ಗಣರಾಜ್ಯೋತ್ಸವದ ಆಚರಣೆಯೇ ಇರಬಹುದು ಅಥವಾ ಭಾರತೀಯ ದೂತವಾಸದ ಯಾವುದೇ ಅಂಗ ಸಂಸ್ಥೆಗಳ ಸಮಾರಂಭವಾಗಿರಬಹುದು, ಅದೂ ಅಲ್ಲದೆ ಸಂಘವು ಹಮ್ಮಿಕೊಂಡ ಯಾವುದೇ ಮಾನವೀಯ ಅಥವಾ ಕ್ರೀಡಾ ಚಟುವಟಿಕೆಗಳ ಕಾರ್ಯಕ್ರಮಗಳೇ ಇರಬಹುದು, ಕರ್ನಾಟಕ ಸಂಘವು ಮುಂಚೂಣಿಯಲ್ಲಿದ್ದು ತನ್ನ ಸಾಮಾಜಿಕ, ನೈತಿಕ ಬದ್ಧತೆಯನ್ನು ಮತ್ತು ನಿಷ್ಠೆಯನ್ನು ಪ್ರದರ್ಶಿಸಿದೆ. ಈ ಎಲ್ಲಾ ಕಾರ್ಯಕ್ರಮದಲ್ಲಿ ಸಂಘದ ಬೆನ್ನೆಲುಬಾದ ಕಾರ್ಯಸಾಧಕ ಸದಸ್ಯ ಪಡೆಯು ತನ್ನ ಅಮೋಘವಾದ ಶಕ್ತಿ ಮತ್ತು ಸಾಮರ್ಥ್ಯವನ್ನು ತೋರಿ ಸಂಘದ ಗೌರವ-ಮರ್ಯಾದೆಯನ್ನು ದ್ವಿಗುಣಗೊಳಿಸಿದೆ.

ಹೊಸದಾಗಿ ಆಯ್ಕೆಯಾಗಿರುವ ೨೦೦೯-೧೦ನೇ ಸಾಲಿನ ಸಂಘದ ಸದಸ್ಯ ಪಡೆಯೂ ಕೂಡ ಎಂದಿನಂತೆ ಅಸಾಮಾನ್ಯ ಕಾರ್ಯಶೀಲ ಹಾಗು ನಿಖರತೆಯ ಮಾಪನಗಳೊಂದಿಗೆ ತನ್ನ ಕಾರ್ಯಚಟುವಟಿಕೆಯ ಸರಣಿಯನ್ನು ಪ್ರಾರಂಭಿಸಿದ್ದು, ಈಗಾಗಲೇ ಅಮೋಘವಾದ ಮುನ್ನುಡಿಯನ್ನು ಮೂರು ಕಾರ್ಯಕ್ರಮಗಳ ಮೂಲಕ ನಿರೂಪಣೆಗೊಳಿಸಿದೆ. ಸ್ವಾತಂತ್ರ್ಯ ದಿನಾಚರಣೆಯ "ಚಂದ್ರಶೇಖರ ಆಝಾದ್" ಪ್ರಹಸನವು ಪ್ರೇಕ್ಷಕರ ಅಮೋಘ ಪ್ರಶಂಸೆಯನ್ನು ಪಡೆದರೆ, ಅನಂತರ ನಡೆದ ರಕ್ತದಾನ ಶಿಬಿರದಲ್ಲಿ ದಾಖಲೆಯ ೩೦ ಯುನಿಟ್ ಗಳಷ್ಟು ರಕ್ತ ಸಂಗ್ರಹವಾಗಿ ಸಂಘದ ಒಂದು ಅವಿಸ್ಮರಣೀಯ ಘಟನೆಯಾಗಿ ಸಂಘದ ಚಾರಿತ್ರಿಕ ಪುಟಗಳಲ್ಲಿ ದಾಖಲಾಯಿತು. ಇದಕ್ಕೆ ಮೆರುಗು ನೀಡಿದಂತೆ ನಡೆದ ಮತ್ತೊಂದು ಅಭೂತಪೂರ್ವ ಸಮ್ಮಿಲನ ಸಮಾರಂಭವೇ, ಸಂಘದ ಸ್ತ್ರೀ ಘಟಕದ "ಸ್ತ್ರೀ ಸಂಜೆ" ಕಾರ್ಯಕ್ರಮ. ದಾಖಲೆಯ ಸಂಖ್ಯೆಯಲ್ಲಿ ಬಂದಂತಹ ಸ್ತ್ರೀ ಸದಸ್ಯರು ಕಾರ್ಯಕ್ರಮವನ್ನು ಸಫಲಗೊಳಿಸಿದರು. ಈ ರೀತಿಯ ಕಾರ್ಯಕ್ರಮಗಳು ಮುಂದೆಯೂ ಇದೇ ರೀತಿ ನಡೆಯುತ್ತಿರುತ್ತಿದೆ ಎಂಬ ಸಂಘದ ಅಭಿಪ್ರಾಯವನ್ನು ನಾನು ನಿಮ್ಮ ಮುಂದೆ ಇಡುತ್ತಿದ್ದೇನೆ.

ಇಂತಹ ಸಂತಸದ ನಡುವೆ ನಮ್ಮ ಮನಸ್ಸನ್ನು ಬಹಳವಾಗಿ ನೋಯಿಸಿದ ಘಟನೆ ನಮ್ಮ ತಾಯಿನಾಡಿನಲ್ಲಿ ನಡೆಯಿತು. ಪ್ರಕೃತಿಮಾತೆ ಜಲರೂಪಿಣಿಯಾಗಿ ಉತ್ತರ ಕರ್ನಾಟಕದ ಬಹುಭಾಗವನ್ನು ಸಂಕಟದಲ್ಲಿ ಮುಳುಗಿಸಿದಾಗ, ನಮ್ಮೆಲ್ಲರ ಮನ, ಆ ನೊಂದ ನಮ್ಮ ಬಂಧು ಭಗಿನಿಯರ ಜೊತೆಯಲ್ಲಿ ಪರಿತಪಿಸಿತು. ಕರ್ನಾಟಕ ಸಂಘವು ತನ್ನ ಪರಿಧಿಯಲ್ಲಿ ಆ ನೊಂದ ಜೀವಗಳಿಗೆ ತನ್ನ ಅಳಿಲಸೇವೆಯನ್ನು ಸಲ್ಲಿಸಿತು. ಪ್ರಾಯಶಃ ಇದೆಲ್ಲಾ ಸಾಧ್ಯವಾಗುತ್ತಿರುವುದು ಕತಾರಿನ ಭಾರತಿಯ ದೂತವಾಸ, ಇಂಡಿಯನ್ ಕಲ್ಚರಲ್ ಸೆಂಟರ್, ಕತಾರಿನ ಸಹೃದಯಿ ಮಾನವೀಯ ಕನ್ನಡಿಗರು ಮತ್ತು ಸಂಘದ ಪ್ರತ್ಯಕ್ಷ ಮತ್ತು ಪರೋಕ್ಷ ಹಿತೈಷಿಗಳ ಪೂರ್ಣ ಸಹಕಾರ ಹಾಗು ಕೊಡುಗೈ ದಾನದ ಮೂಲಕ. ಇಲ್ಲದ್ದಿದರೆ ನಾವು ಈ ಸಾಮಾಜಿಕ ಹೊಣೆಯನ್ನು ಪರಿಪೂರ್ಣಗೊಳಿಸಲು ಆಗುತ್ತಿರಲಿಲ್ಲ.

ಸಂಘದ ಈ ಎಲ್ಲಾ ಯಶ್ಸಸಿಗೆ ಕಾರಣರಾದ ಎಲ್ಲಾ ಮಹನೀಯರಿಗೆ, ಸಂಘ ಸಂಸ್ಥೆಗಳಿಗೆ, ಹಿತೈಷಿಗಳಿಗೆ ಸಂಘದ ಪರವಾಗಿ ನಾನು ನನ್ನ ಅನಂತಾನಂತ ಧನ್ಯವಾದಗಳನ್ನು ಅರ್ಪಿಸುತ್ತೇನೆ ಮತ್ತು ಮುಂದಿನ ದಿನಗಳಲ್ಲಿ ಈ ಮಹನೀಯರ ಸಹಾಯ ಸಹಕಾರವು ನಮ್ಮೊಂದಿಗೆ ಇರಲಿ ಎಂದು ಆಶಿಸುತ್ತೇನೆ.

ಗೆಳೆಯರೆ, ಬನ್ನಿ, ನಮಗೆ ಲಭ್ಯವಾಗಿರುವ ಮಹತ್ತರ ಕಾರ್ಯಗೌರವವನ್ನು ಹೆಗಲಿಗೇರಿಸಿ ಮುನ್ನಡೆಯೋಣ. ಸಂಘದ ಕೀರ್ತಿ ಪತಾಕೆಯನ್ನು ಹಾರಿಸೋಣ.
ಜೈ ಹಿಂದ್, ಜೈ ಕರ್ನಾಟಕ.

ಅರುಣ್ ಕುಮಾರ್ ಕೆ. ಎಮ್,
ಅಧ್ಯಕ್ಷರು


# ಕರ್ನಾಟಕ ಸಂಘದ ಆಡಳಿತ ಮಂಡಳಿ ೨೦೦೯-೨೦೧೦



ಅರುಣ್ ಕುಮಾರ್
ಅಧ್ಯಕ್ಷರು



ವಿ.ಎಸ್.ಮನ್ನಂಗಿ
ಉಪಾಧ್ಯಕ್ಷರು



ಅರುಣ್ ಕುಮಾರ್ ಎಮ್.ಕೆ
ಪ್ರಧಾನ ಕಾರ್ಯದರ್ಶಿ



ನಾಗೇಶ್ ರಾವ್
ಖಜಾಂಚಿ



ಸುಬ್ರಮ್ಮಣ್ಯ
ಸಾಂಸ್ಕೃತಿಕ ಕಾರ್ಯದರ್ಶಿ



ಮಂಜುನಾಥ್
ಸಂಪರ್ಕಾಧಿಕಾರಿ



ಕಲ್ಯಾಣ್ ಶೆಟ್ಟಿ
ಮಾಹಿತಿ ವಿಭಾಗ ಮುಖ್ಯಸ್ಥರು



ದೀಪಕ್ ಶೆಟ್ಟಿ
ಕ್ರೀಡಾ ಕಾರ್ಯದರ್ಶಿ



ಅಶೋಕ್ ಉಣಕಲ್
ಮಕ್ಕಳ ಸಂಚಾಲಕರು




ಮೊಹಮ್ಮದ್ ನಯೀಂ
ಸಹ ಕಾರ್ಯದರ್ಶಿ



ಗುರುಪ್ರಸಾದ್
ಸಹ ಸಾಂಸ್ಕೃತಿಕ ಕಾರ್ಯದರ್ಶಿ



ಮಧು ಎಚ್.ಕೆ.
ಪ್ರಧಾನ ಸಂಪಾದಕರು



ಜೆ.ಜೆ.ಪಾಲ್
ಉಪ ಸಂಪಾದಕರು



ರೂಪ ಪ್ರಮೋದ್
ಮಹಿಳಾ ಸಂಚಾಲಕಿ

## ಸಲಹಾ ಸಮಿತಿ




ಸುಧಾ ಪ್ರಭಾಕರ
ಮಕ್ಕಳ ವಿಭಾಗ



ಅರವಿಂದ್ ಪಾಟೀಲ್



ಸಂಜಯ್ ಕುದ್ರಿ



ಕೆ.ಪ್ರಭಾಕರ




ಮಿಲನ್ ಅರುಣ್
ಮಹಿಳಾ ವಿಭಾಗ

## ಕಾರ್ಯಕಾರಿ ಸಮಿತಿ ಸದಸ್ಯರು




ಗುರುನಾಥ್



ನಿಯಾಜ್ ಅಹ್ಮದ್



ದಿನೇಶ್ ಗೌಡ



ಎಮ್.ಎ.ಶರೀಫ



ರುದ್ರಮುನಿ



ನೂರ್ ಅಹ್ಮದ್



ಶಿಲ್ಪ ಮನ್ನಂಗಿ



ಸುಮ ಉಣಕಲ್



ಹೇಮಾ ಲಕ್ಕಪ್ಪ



## ಸಂಪಾದಕೀಯ....

ಆತ್ಮೀಯ ಸಹೃದಯಿ ಸ್ನೇಹ ಬಂಧುಗಳೇ,

ನಮ್ಮ ನಾಡಿನ ಹೆಸರಾಂತ ದಾರ್ಶನಿಕ ಕವಿಪುಂಗವರಾದ ಶ್ರೀಯುತ ಡಿ.ವಿ. ಗುಂಡಪ್ಪನವರ "ಮಂಕುತಿಮ್ಮನ ಕಗ್ಗ" ವೊಂದರ ಪದ್ಯ ನೆನಪಾಗುತ್ತಿದೆ. ಅದರಲ್ಲಿ, ಡಿ.ವಿ.ಜಿ. ಹೀಗೆ ಹೇಳುತ್ತಾರೆ, "ನಾವೆಲ್ಲಾ ಇರುವುದು ಒಂದೇ ಗಗನದಡಿ, ಬಾಳುವುದು ಒಂದೇ ಭೂಮಿಯಲ್ಲಿ, ಉಣ್ಣುವುದು ಒಂದೇ ಧಾನ್ಯ, ಕುಡಿಯುವುದು ಒಂದೇ ನೀರು, ಅದಕ್ಕಿಂತ ಹೆಚ್ಚಾಗಿ ಒಂದೇ ಗಾಳಿಯನ್ನು ಸೇವಿಸುವ ನಮ್ಮಲ್ಲಿ ವ್ಯತ್ಯಾಸಗಳೇಕೆ, ಭೇಧ - ಭಾವಗಳೇಕೆ?" ಮತ್ತೆ ಮುಂದುವರಿದು ಅವರೇ ಇದಕ್ಕೆ ಕಾರಣ ನೀಡುತ್ತಾರೆ. ಈ ಎಲ್ಲಾ ರೀತಿಯ ವ್ಯತ್ಯಯಗಳಿಗೆ ನಮ್ಮಲ್ಲಿರುವ ರಾಗ-ದ್ವೇಷ, ಸ್ವಾರ್ಥ, ದ್ರೋಹ, ಲಾಲಸೆ ಮತ್ತು ದುರ್ನಡತೆಗಳಲ್ಲದೇ ಬೇರೇನೂ ಅಲ್ಲ. ಇವನ್ನೆಲ್ಲಾ ಮೀರಿ ನಿಂತವ, ನಿಜವಾದ ಮಾನವನಾಗುತ್ತಾನೆಂದು ತಿಳಿಸುತ್ತಾರೆ.

ನೋಡಿ, ಸ್ವಲ್ಪ ಸಾವಧಾನವಾಗಿ ನಾವು ಈ ಬಗ್ಗೆ ಯೋಚಿಸಿದರೆ, ಡಿವಿಜಿಯವರ ಮಾತುಗಳು ನಮಗೆಲ್ಲಾ ಎಷ್ಟೊಂದು ಅನ್ವಯವಾಗುತ್ತದೆಯೆಂದು ತಿಳಿಯುತ್ತದೆ. ಹುಟ್ಟು ಗುಣ ಸುಟ್ಟರೂ ಹೋಗದೆಂಬುದು ದಿಟವಾದರೂ, ಒಂದು ಸುಂದರ, ನಿರ್ಮಲ, ಸ್ವಾರ್ಥರಹಿತ ಸಮಾಜ ನಿರ್ಮಾಣಮಾಡಿ, ಆ ಪರಿಸರದಲ್ಲಿ ನಾವೆಲ್ಲಾ ಬದುಕಿ ಬಾಳಿದಾಗ, ಈ ನಿಟ್ಟಿನಲ್ಲಿ ಒಟ್ಟಾರೆ ಪರಿಸ್ಥಿತಿ ಸುಧಾರಿಸೀತು. ಹೀಗೆಂದು, ಇಂದಿನಿಂದ ಒಂದು ದೀಕ್ಷೆ ತೊಡೋಣ. ಸಮಾಜದ ಸ್ವಾಸ್ಥ್ಯಕ್ಕೆ ನಮ್ಮಿಂದಾಗುವ ಕಿಂಚಿತ್ ಪ್ರಯತ್ನ ಮಾಡೋಣ.

ನೆರೆ ಹಾವಳಿಯ ಕರಾಳ ಛಾಯೆಯಲ್ಲಿ, ಇಂದಿನ ರಾಜ್ಯೋತ್ಸವ ಮಂಕಾಗಿದೆ. ಆಸ್ತಿ-ಪಾಸ್ತಿ, ಸೂರು ಕಳೆದುಕೊಂಡ ಜನರ ಬದುಕು ದುಸ್ತರವಾಗಿದೆ. ಅಲ್ಲಿನ ಸಂತ್ರಸ್ತರು ಮಾಮೂಲಿನಂತೆ ಬದುಕಲು ಹಲವಾರು ವರ್ಷಗಳೇ ಬೇಕಾದೀತು. ನಮ್ಮ ಕರ್ನಾಟಕ ಸಂಘ ಕೂಡ ಈ ಜನರ ಬವಣೆ ನೀಗಿಸಲು ದೇಣಿಗೆ ಸಂಗ್ರಹಿಸಿ ಕಳುಹಿಸಿದೆ. ಇಂತಹ ಸ್ತುತ್ಯ ಕಾರ್ಯಗಳಲ್ಲವೆ ಎಲ್ಲರಿಗೂ ಮಾದರಿಯಾಗುವುದು.!

ಇದನ್ನೆಲ್ಲಾ ಒತ್ತಟ್ಟಿಗಿಟ್ಟು, ನಾಡಹಬ್ಬವನ್ನು ಸರಳವಾಗಿ ಆಚರಿಸಬೇಕಾಗಿರುವುದು ಕರ್ತವ್ಯ ಹಾಗೂ ಅನಿವಾರ್ಯ. ನಾಡು-ನುಡಿ ಕಟ್ಟಿ ಬೆಳೆಸಿದ, ಬೆಳೆಸುತ್ತಿರುವ ಮಹಾ ಚೇತನಗಳಿಗೆ ನಮಸ್ಕರಿಸೋಣ. ನಮ್ಮೆಲ್ಲರ ಹೃದಯ ಭಾಷೆಯಾದ ಕನ್ನಡವನ್ನು ಬೆಳೆಸಿ, ಉಳಿಸಬೇಕಾದ ಸಂದರ್ಭ ಹಿಂದೆಂದಿಗಿಂತಲೂ ಈಗ ಅಗತ್ಯವಾಗಿ ಗೋಚರಿಸತೊಡಗಿದೆ. ಭಾಷೆಯ ಅವಸಾನ ಎಂದಿಗೂ ಆಗದಂತೆ, ಮುಂದಿನ ಪೀಳಿಗೆಯವರಿಗೆ ನಮ್ಮ ಭಾಷಾ ಹಿರಿಮೆಯ, ವೈವಿಧ್ಯತೆಯ, ಸೊಗಡಿನ, ಸುಂದರತೆಯ ಬಗ್ಗೆ ತಿಳಿಸಬೇಕಾಗಿರುವುದು ನಮ್ಮ ಜವಾಬ್ದಾರಿ. ಇದು ಸಾಧ್ಯವಾಗಬೇಕಾದಲ್ಲಿ, ನಾವೆಲ್ಲಾ ಮನೆಗಳಲ್ಲಿ, ಸ್ನೇಹಿತರೊಂದಿಗೆ, ಮಕ್ಕಳೊಂದಿಗೆ, ಹೆಚ್ಚಾಗಿ, ಕನ್ನಡ ಬಲ್ಲ ಮಂದಿಯೊಂದಿಗೆ ಕನ್ನಡದಲ್ಲೇ ಮಾತಾಡೋಣ. ನಮ್ಮ ಸುತ್ತ ಮುತ್ತ ಕನ್ನಡದ ವಾತಾವರಣ ನಿರ್ಮಾಣ ಮಾಡುವುದು ಕೂಡ ಕನ್ನಡಾಂಬೆಗೆ ನಾವು ಮಾಡಬಹುದಾದ ಅದ್ಭುತ ಸೇವೆ. ಈ ದಿಸೆಯಲ್ಲಿ ಕಾರ್ಯಪ್ರವೃತ್ತರಾಗುವುದು ಇಂದಿನ ರಾಜ್ಯೋತ್ಸವದ ಸಂಕಲ್ಪವಾಗಲಿ ಎಂಬ ಆಶಯದೊಂದಿಗೆ,

ತಮ್ಮ ವಿಶ್ವಾಸಿ,
ಹೆಚ್. ಕೆ. ಮಧು
ಸಂಪಾದಕರು

---

ಈ ಸಂಚಿಕೆಗೆ ಅವಿರತವಾಗಿ ದುಡಿದು ಸುಂದರವಾಗಿ ಮೂಡಿಬರಲು ಸಹಕರಿಸಿದ ಪಾಲ್, ಎನ್.ಮಂಜುನಾಥ್, ಕೆ.ಎಮ್.ಅರುಣ್ ಕುಮಾರ್ ಮತ್ತು ಶಿಲ್ಪ ಮನ್ನಂಗಿ, ರೂಪಾ ಪ್ರಮೋದ್‌ರವರಿಗೆ ಆಭಾರಿ. ಸಕಾಲದಲ್ಲಿ ಲೇಖನ, ಕವನ, ಚುಟುಕುಗಳನ್ನು ಒದಗಿಸಿದ ಸದಸ್ಯರಿಗೆ ಹಾಗೂ ಜಾಹೀರಾತುದಾರರಿಗೆ, ಸಂಪಾದಕೀಯ ಮಂಡಳಿ ಮತ್ತು ಕಾರ್ಯಕಾರಿ ಸಮಿತಿಯ ಧನ್ಯವಾದಗಳು. ಮುಖ ಪುಟ ವಿನ್ಯಾಸವನ್ನು ಸುಂದರಗೊಳಿಸಿದ ಮಿಲನ್ ಅರುಣ್‌ರವರ ಸಹಕಾರ ಸ್ಮರಣೀಯ. ಸಂಚಿಕೆಯ ಬಗ್ಗೆ ನಿಮ್ಮ ಅಭಿಪ್ರಾಯ ತಿಳಿಸಿ. ಮುಂಬರುವ ದಿನಗಳಲ್ಲಿ 'ಶ್ರೀಗಂಧ'ದ ಪರಿಮಳ ಇನ್ನಷ್ಟು ಹೆಚ್ಚಾಗಲು ಸಹಕರಿಸಿ.